

ತೋರಣಗಲ್ಲು ಸಮೀಪದ ಕುಡಿತಿನಿಯಲ್ಲಿ ಇತ್ತೀಚೆಗೆ ಎ.ಸಿ.ಸಿ.ಕುಡಿತಿನಿ ಸಿಮೆಂಟ್ ವರ್ಕ್ಸ್ ಮತ್ತು ಫೋರಂ ಫಾರ್ ರೂರಲ್ ಡೆವಲಪ್‌ಮೆಂಟ್ ಹಮ್ಮಿಕೊಂಡಿದ್ದ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಬಾಲಕರು ಚಿತ್ರಕಲಾಕೃತಿಗಳನ್ನು ಪ್ರದರ್ಶಿಸಿದರು

# ಕುಡಿತಿನಿಯಲ್ಲಿ ಚಿತ್ರಕಲಾ ಸ್ಪರ್ಧೆ

ತೋರಣಗಲ್ಲು: 4ರಿಂದ 9ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಎಸಿಸಿ ಸಿಮೆಂಟ್ ವರ್ಕ್ಸ್ ಮತ್ತು ಫೋರಂ ಫಾರ್ ರೂರಲ್ ಡೆವಲಪ್‌ಮೆಂಟ್ ಜಂಟಿಯಾಗಿ ಸಮೀಪದ ಕುಡಿತಿನಿ ಪಟ್ಟಣದ ವಾಲ್ಮೀಕಿ ಭವನದಲ್ಲಿ ಇತ್ತೀಚೆಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಿತ್ತು.

ರಸ್ತೆ ಸುರಕ್ಷತೆ, ವಿದ್ಯುತ್ ಸುರಕ್ಷತೆ, ಪರಿಸರ ಮಾಲಿನ್ಯ, ವೈಯಕ್ತಿಕ ಸ್ವಚ್ಛತೆ ಕುರಿತ ಚಿತ್ರ ರಚನಾ ಸ್ಪರ್ಧೆಯಲ್ಲಿ ವೇಣಿವೀರಾಪುರ, ಸಿದ್ದಮ್ಮನಹಳ್ಳಿಯ 45 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎ.ಸಿ.ಸಿ. ಲೇಡಿಸ್ ಕ್ಲಬ್‌ನ ಅಧ್ಯಕ್ಷೆ ಮೋನಿಕಾ ಭಗತ್ ಮಾತನಾಡಿ, 'ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಸ್ಪರ್ಧೆ ಆಯೋಜಿಸಲಾಗಿದೆ' ಎಂದರು. ಸಿಎಸ್‌ಆರ್ ವ್ಯವಸ್ಥಾಪಕ ರಾಮಾಂಜನೇಯಲು. ಅಭಿಷೇಕ್ ಬಿಸ್ವಾಸ್. ಶಂಕರಗೌಡ, ಫೋರ್ಡ್ ಸಂಸ್ಥೆಯ ಸಿಬ್ಬಂದಿ ಕೆ.ವಿ. ಲಕ್ಷ್ಮೀನಾರಾಯಣ, ಪಿ.ಎಂ. ವಿಜಯಕುಮಾರ್, ವೆಂಕಟೇಶ, ಆರತಿ, ವಿದ್ಯಾ ಈ ಸಂದರ್ಭದಲ್ಲಿ ಇದ್ದರು.